# ಹನುಮಂತನ ಭಕ್ತಿ



✸ ರಾಮ ಹನುಮಂತನನ್ನು ಕೇಳಿದ, 'ಹನುಮಂತ, ನೀನು (ಲಂಕೆಯಿಂದ) ಸೀತೆಯ ಸಂದೇಶವನ್ನು ತಂದಿದ್ದೀಯೆ; ಆಕೆ ಯಾವ ರೀತಿ ಇದ್ದಾಳೆ ಎಂಬುದನ್ನು ನನಗೆ ತಿಳಿಸು.' ಹನುಮಂತ ಹೇಳಿದ, 'ಹೇ ರಾಮ, ಸೀತೆಯ ಸ್ಥೂಲ ಶರೀರ ಅಲ್ಲಿ ಬಿದ್ದಿರುವುದನ್ನು ಕಂಡೆ. ಅದರೊಳಗೆ ಪ್ರಾಣವೂ ಇಲ್ಲ ಮನಸ್ಸೂ ಇಲ್ಲ. ಆಕೆ ತನ್ನ ಪ್ರಾಣ ಮನಸ್ಸನ್ನು ನಿಮ್ಮ ಪಾದ ಪದ್ಮಗಳಿಗೆ ಅರ್ಪಿಸಿಬಿಟ್ಟಿದ್ದಾಳೆ. ಅದಕ್ಕಾಗಿ ಬರೀ ಸ್ಥೂಲಶರೀರ ಮಾತ್ರ ಅಲ್ಲಿ ಬಿದ್ದಿದೆ. ಯಮ ಅದರ ಹತ್ತಿರ ಸುಳಿದಾಡುತ್ತಿದ್ದಾನೆ. ಆತ ಏನು ತಾನೆ ಮಾಡಿಯಾನು? ಅಲ್ಲಿ ಬಿದ್ದಿರುವುದು ಬರೀ ಸ್ಥೂಲಶರೀರ ಮಾತ್ರ; ಮನಸ್ಸು, ಪ್ರಾಣ ಅದರಲ್ಲಿ ಇಲ್ಲ.'

✸ ಹನುಮಂತ ಸಾಕಾರ ನಿರಾಕಾರಗಳ ಸಾಕ್ಷಾತ್ಕಾರ ಪಡೆದುಕೊಂಡ ನಂತರ 'ದಾಸ ಅಹಂ' ಇಟ್ಟುಕೊಂಡಿದ್ದ.

✸ ಆಲೋಚಿಸಿ ನೋಡಿ, ಹನುಮಂತನ ಭಾವ ಎಂಥದು ಎಂಬುದನ್ನು. ಧನ, ಮಾನ, ದೇಹಸುಖ ಯಾವುದೂ ಅವನಿಗೆ ಬೇಕಾಗಿರಲಿಲ್ಲ. ಬೇಕಾಗಿದ್ದುದು ಕೇವಲ ಭಗವಂತ ಮಾತ್ರ. ಸ್ಫಟಿಕದ ಕಂಬದೊಳಗಿಟ್ಟಿದ್ದ ಬ್ರಹ್ಮಾಸ್ತ್ರ ತೆಗೆದುಕೊಂಡು ಪರಾರಿಯಾಗುತ್ತಿದ್ದಾಗ, ಮಂಡೋದರಿ ವಿವಿಧ ಫಲಗಳಿಂದ ಆತನನ್ನು ಲೋಭಗೊಳಿಸಲು ಪ್ರಯತ್ನಿಸಿದಳು. ಆದರೆ ಹನುಮಂತ ಇದಕ್ಕೆಲ್ಲಾ ಮರುಳು ಹೋಗುವ ಮಗುವೇ! ಆಗ ಆತ ಹೀಗೆ ಹಾಡಿದ:

ನನಗಾವ ಫಲ ಬೇಕು
ಜನ್ಮ ಸಫಲವ ಗೈವ ಫಲವಿರಲು ನನಗೆ?
ಮೋಕ್ಷಫಲಗಳ ಬಿಡುವ
ಶ್ರೀರಾಮತರುವಿಹುದು ಎನ್ನ ಎದೆಯೊಳಗೆ!
ಶ್ರೀರಾಮ ಕಲ್ಪತರು ಮೂಲದಲಿ ನಾ ಕುಳಿತು
ಬೇಕಾದ ಫಲಗಳನು ಪಡೆಯುತಿರುವೆ
ಪ್ರತಿಫಲವ ನಾ ಬಯಸೆ, ಜಗದ ಕಹಿಫಲಗಳನು
ನಿಮ್ಮೊಂದಿಗೇ ಬಿಟ್ಟು ಮುನ್ನಡೆಯುವೆ!

✸ ಒಮ್ಮೆ ರಾಮ ಹನುಮಂತನನ್ನು ಕೇಳಿದ: ''ನನ್ನನ್ನು ನೀನು ಯಾವ ದೃಷ್ಟಿಯಿಂದ ನೋಡುತ್ತ ಇದ್ದೀಯೆ?'' ಹನುಮಂತ ಹೇಳಿದ: ''ಹೇ ರಾಮ, ನನ್ನಲ್ಲಿ 'ಅಹಂ' ಎಂಬ ಬೋಧೆ ಇರುವವರೆಗೆ ನನಗೆ ಕಂಡುಬರುತ್ತದೆ, ನೀನು ಪೂರ್ಣ, ನಾನು ಅಂಶ; ನೀನು ಪ್ರಭು, ನಾನು ದಾಸ ಎಂಬುದಾಗಿ. ಆದರೆ ರಾಮ, ತತ್ತ್ವಜ್ಞಾನ ಬಂದೊಡನೆಯೇ ಕಂಡುಬರುತ್ತದೆ, ನೀನೇ ನಾನು, ನಾನೇ ನೀನು ಎಂಬುದಾಗಿ.''

✸ ಒಮ್ಮೆ ಒಬ್ಬ ಹನುಮಂತನನ್ನು ಕೇಳಿದನಂತೆ: ''ಇಂದು ಯಾವ ತಿಥಿ?'' ಆತ ಅದಕ್ಕೆ ಹೇಳಿದನಂತೆ: ''ತಮ್ಮ, ನನಗೆ ತಿಥಿ, ವಾರ, ನಕ್ಷತ್ರ ಇವು ಯಾವುದೂ ಗೊತ್ತಿಲ್ಲ. ನಾನು ಕೇವಲ ರಾಮಚಿಂತನೆಯನ್ನು ಮಾತ್ರ ಮಾಡುತ್ತಿದ್ದೇನೆ.''

✸ ಮನಸ್ಸಿನ ಬಲದಿಂದ ಹನುಮಂತ ಸಮುದ್ರವನ್ನು ದಾಟಿಬಿಟ್ಟ. 'ನಾನು ರಾಮದಾಸ; ರಾಮನಾಮ ಜಪಿಸುತ್ತಿದ್ದೇನೆ. ನನ್ನ ಕೈಯಲ್ಲಿ ಏನುತಾನೆ ಸಾಧ್ಯವಿಲ್ಲ?' ಎಂಬುದಾಗಿತ್ತು ಹನುಮಂತನ ವಿಶ್ವಾಸ.

✸ ಹನುಮಂತನು ಸಾಕಾರ ನಿರಾಕಾರ ಎರಡರ ಸಾಕ್ಷಾತ್ಕಾರವನ್ನೂ ಪಡೆದು ದಾಸ್ಯಭಾವದಿಂದ — ಭಕ್ತನ ಭಾವದಿಂದ ಇದ್ದುಕೊಂಡಿದ್ದ.

✸ ಭಕ್ತ್ಯುನ್ಮಾದ ಎಂಬುದೂ ಇದೆ. ಉದಾಹರಣೆಗೆ ಹನುಮಂತನದು. ಸೀತೆ ಅಗ್ನಿಪ್ರವೇಶ ಮಾಡುತ್ತಿರುವುದನ್ನು ನೋಡಿ, ರಾಮನನ್ನು ಕೊಲ್ಲಲು ಹೋಗಿಬಿಟ್ಟಿದ್ದ.

✸ ಯಾವುದಾದರೊಂದು ಭಾವವನ್ನು ಆಶ್ರಯಿಸಿಕೊಂಡು ಭಗವಂತನನ್ನು ಕರೆಯಬೇಕು. ಹನುಮಂತನದು ಜ್ಞಾನಮಿಶ್ರಿತ ಭಕ್ತಿ.

✸ ಲಂಕೆಯಿಂದ ಹಿಂದಿರುಗಿದ ನಂತರ ಹನುಮಂತ ರಾಮನನ್ನು ಸ್ತೋತ್ರ ಮಾಡುತ್ತ ಹೇಳಲಾರಂಭಿಸಿದ: '' ಹೇ ರಾಮ, ನೀನೇ ಪರಬ್ರಹ್ಮ, ಸೀತೆಯೇ ನಿನ್ನ ಶಕ್ತಿ; ಆದರೆ ನೀವಿಬ್ಬರೂ ಭೇದರಹಿತರು''

✸ ಒಮ್ಮೆ ಹನುಮಂತ ರಾಮನಿಗೆ ಹೇಳಿದ : ''ಹೇ ರಾಮ, ನಾನು ನಿನ್ನಲ್ಲಿ ಶರಣಾಗತ, ಶರಣಾಗತ. ನಿನ್ನ ಪಾದ ಪದ್ಮಗಳಲ್ಲಿ ನನಗೆ ಶುದ್ಧ ಭಕ್ತಿಯಾಗುವಂತೆಯೂ, ನಿನ್ನ ಭುವನಮೋಹಿನಿ ಮಾಯೆಯಿಂದ ನಾನು ಮುಗ್ಧನಾಗದೆ

ಶ್ರೀರಾಮಕೃಷ್ಣ ವಚನವೇದದಿಂದ